**ದಿನಾಂಕಃ 03-08-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ವೈ.ಹೆಚ್.ಕೆ. ವಕೀಲರಿಂದಃ**

11 ನೇ ಪ್ರತಿವಾದಿ ಶಬಿಯಾ ರವರು ಯಾವ ಊರಿನಲ್ಲಿದ್ದಾರೆ ಎಂದರೆ ಕೋಡಿಯಾಲ ಗ್ರಾಮದಲ್ಲಿದ್ದಾರೆ. ಶಬಿಯಾ ನನ್ನ ಹೆಂಡತಿ. ನನ್ನ ಹೆಂಡತಿ ಎನು ಕೆಲಸ ಮಾಡುತ್ತಾರೆ ಎಂದರೆ ಮನೆಯಲ್ಲಿದ್ದಾರೆ. ಅವರಿಗೆ ಹೊರಗಡೆ ಓಡಾಡಲು ಆಗುವುದಿಲ್ಲ ಮನೆಯಲ್ಲಿ ಊಟ ಮಾಡಿಕೊಂಡು ಇದ್ದಾರೆ. ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುವ ಬಗ್ಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿಲ್ಲ. ಚಿಕಿತ್ಸೆ ಕೊಡಿಸಿರುವ ಬಗ್ಗೆ ದಾಖಲೆಗಳನ್ನು ಹಾಜರಪಡಿಸಲು ತೊಂದರೆ ಇದೆಯಾ ಎಂದರೆ ಇಲ್ಲ. ನನ್ನ ಹೆಂಡತಿ ಆರೋಗ್ಯವಾಗಿದ್ದು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಅವರ ಪರವಾಗಿ ನಾನು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಈ ಪ್ರಕರಣದಲ್ಲಿ ಡಿ ಡಬ್ಲ್ಯೂ -4 ರಂತೆ ಈಗಾಗಲೇ ಸಾಕ್ಷಿ ವಿಚಾರಣೆ ಕೊಟ್ಟಿದ್ದೇನೆ ಎಂದರೆ ನಿಜ. ನನ್ನ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಿರುವ ಆಸ್ತಿಯ ನಂಬರು ಎನು ಎಂದರೆ 702/12 ಎ ಎಂದು ಹೇಳುತ್ತಾರೆ. ಅದರ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದರೆ ಪೂರ್ವ ಪಶ್ಚಿಮ 24 ಅಡಿ, ಉತ್ತರ ದಕ್ಷಿಣ 44 ಅಡಿ ಇದೆ. ವಾದಿಯ ಕುಟುಂಬಕ್ಕೆ ಸೇರಿದಂತಹ ಇನ್ನು ಬೇರೆ ಬೇರೆ ಆಸ್ತಿಗಳು ಇದೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದ ಎರಡನೇ ಪ್ಯಾರಾದಲ್ಲಿ ಹೇಳಿರುವ ವಿಚಾರಗಳಿಗೆ ಸಂಬಂದಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ. ನನಗೆ 5 ಮತ್ತು 10 ನೇ ಪ್ರತಿವಾದಿಯ ಜೊತೆ ತುಂಬಾ ಒಡನಾಟ ಇದೆ ಎಂದರೆ ಒಂದೇ ಊರಿನವರು ಆಗಿರುವ ಕಾರಣ ಪರಿಚಯವಿದೆ ಹಾಗೂ ಒಡನಾಟ ಇರುತ್ತದೆ. ನನಗೆ ಮತ್ತು ಪ್ರತಿವಾದಿ 5 ಮತ್ತು 10 ರ ನಡುವೆ ಸುಮಾರು 25 ವರ್ಷಗಳಿಂದ ಸ್ನೇಹ ಸಂಬಂದ ಇರುತ್ತದೆ ಎಂದರೆ ಒಂದೇ ಊರಿನವರು ಆಗಿರುವ ಕಾರಣ ಪರಿಚಯವಿದೆ.

3. ವಾದಿ ಮತ್ತು ವಾದಿಯರ ಅಣ್ಣ ತಮ್ಮಂದಿರ ನಡುವೆ ಪಾಲು ವಿಭಾಗ ಆಗಿದೆ ಎಂದು ಹೇಳುವ ವಿಚಾರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆಯಾ ಎಂದರೆ ಇದೆ. ಪಾಲು ವಿಭಾಗ ಆಗಿದೆ ಎಂದು ಹೇಳುವ ದಿನಾಂಕ, ತಿಂಗಳು, ಇಸವಿ ಗೊತ್ತಿದೆ ಎಂದರೆ ನನಗೆ ದಿನಾಂಕ

ಗೊತ್ತಿಲ್ಲ. ಆದರೆ 1986 ನೇ ಇಸವಿ ಎಂದು ಹೇಳುತ್ತಾರೆ. ಆ ಪಾಲು ವಿಭಾಗದ ಮಾತು ಕತೆಯಲ್ಲಿ ಯಾರು ಯಾರು ಸೇರಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಾಲು ವಿಭಾಗ ಆಗಿದೆ ಎಂದು ಹೇಳುವ ಸಮಯದಲ್ಲಿ ವಾದಿ ಮಾತುಕತೆಯಲ್ಲಿ ಭಾಗಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಾಲು ವಿಭಾಗ ಪತ್ರಕ್ಕೆ ಯಾರು ಯರು ಸಹಿ ಮಾಡಿದ್ದಾರೆ ಎಂದರೆ ಕರೀಮ ಸಾಬ್, ಚಮನ್ ಸಾಬ್ ರವರು ಹಾಕಿರಬಹುದು ಬೇರೆ ಯಾರು ಹಾಕಿದ್ದಾರೆ ಎಂದು ಗೊತ್ತಿಲ್ಲ. ಆ ಪಾಲು ವಿಭಾಗ ಪತ್ರವನ್ನು ಖುದ್ದಾಗಿ ನೋಡಿದ್ದೀರಾ ಎಂದರೆ ಖರೀದಿ ವ್ಯಾಪಾರ ಮಾಡುವ ಸಮಯದಲ್ಲಿ ಆ ಪಾಲು ವಿಭಾಗ ಪತ್ರವನ್ನು ನೋಡಿರುತ್ತೇನೆ. ಆ ಖರೀದಿ ವ್ಯಾಪಾರಕ್ಕಿಂತ ಪೂರ್ವದಲ್ಲಿ ವಿವಾದ ಪತ್ರವನ್ನು ನೋಡಿದ್ದೀರಾ ಎಂದರೆ ಇಲ್ಲ.

4. ನಾನು, ಖರೀಮ ಸಾಬ್ ಹಾಗೂ ಇತರರು ಸೇರಿಕೊಂಡು ವಾದಿಗೆ ದಾವಾ ಆಸ್ತಿಗಳಲ್ಲಿ ಹಿಸ್ಸೆಯನ್ನು ತಪ್ಪಿಸಬೇಕು ಎಂಬ ಉದ್ದೇಶದಿಂದ ಪಾಲು ವಿಭಾಗ ಪತ್ರ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1986 ರಲ್ಲಿ ಯಾವ ಯಾವ ಆಸ್ತಿಗಳು ಯಾರ ಯಾರ ಹಿಸ್ಸೆಗೆ ಹಾಗೂ ಕಬ್ಜಾಕ್ಕೆ ಹೋಗಿದೆ ಎಂದು ಗೊತ್ತಿದೆಯಾ ಎಂದರೆ ಇಲ್ಲ. ದಿನಾಂಕ 01-07-2016 ರಂದು 5,10,000/- ರೂಪಾಯಿಗೆ ವ್ಯಾಪಾರ ಆದ ಸಮಯದಲ್ಲಿ ಮಾತುಕತೆಯಲ್ಲಿ ಯಾರು ಯಾರು ಇದ್ದರು ಎಂದರೆ ಗಣೇಶಪ್ಪ, ಚೆನ್ನಪ್ಪ, ಸಿದ್ದಲಿಂಗಪ್ಪ, ನಾನು ಇಷ್ಟು ಜನ ಇದ್ದೇವು. ಆ ಮಾತುಕತೆಗೆ ನನ್ನನ್ನು ಯಾರು ಕರೆದಿದ್ದರು ಎಂದರೆ 5 ನೇ ಪ್ರತಿವಾದಿ ಕಲೀಮ್ ಸಾಬ್ ಕರೆದಿದ್ದರು. ನಾನು ಹೇಳುವ ರೀತಿ ಯಾವುದೇ ಮಾತುಕತೆ ಆಗಿರುವುದಿಲ್ಲ 5 ಮತ್ತು 10 ನೇ ಪ್ರತಿವಾದಿಯರು ಶಾಮೀಲು ಆಗಿ ಸುಳ್ಳು ಖರೀದಿ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

5. ಆ ದಿವಸ ದಾವಾ ಕ 1 ನೇ ಆಸ್ತಿಯ ಕಬ್ಜಾದ ಕುರಿತು ಯಾವುದೇ ಮಾತುಕತೆ ಆಗಿಲ್ಲ ಆದರೂ ಸಹ ಕ್ರಯ ಪತ್ರದಲ್ಲಿ ಸುಳ್ಳು ಬರೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. 10 ಮತ್ತು 11 ನೇ ಪ್ರತಿವಾದಿಯರ ನಡುವೆ ಆಸ್ತಿಗಳು ಯಾಕೆ ಅದಲು ಬದಲು ಆಯಿತು ಎಂದರೆ ಎರಡು ಆಸ್ತಿಗಳ ಕುರಿತು ನಮ್ಮ ನಮ್ಮ ಅನುಕೂಲಕ್ಕೆ ತಕ್ಕಂತೆ ಅದಲು ಬದಲು ಪತ್ರ ಮಾಡಿಕೊಂಡಿದ್ದೇವೆ. ಈಗ ಎಲ್ಲಿ ವಾಸವಾಗಿದ್ದೀರಾ ಎಂದರೆ ನಾನು ಮತ್ತು 11 ನೇ ಪ್ರತಿವಾದಿಯರು ದಾವಾ ಆಸ್ತಿ ಕ 1 ಸ್ವತಿನಲ್ಲಿ ವಾಸವಾಗಿದ್ದೇವೆ. ನಾನು ಮತ್ತು 11 ನೇ ಪ್ರತಿವಾದಿ ದಾವಾ ಆಸ್ತಿ ಕ 1 ನೇ ಸ್ವತ್ತಿನಲ್ಲಿ ವಾಸವಾಗಿದ್ದೇವೆ ಎಂದು ತೋರಿಸಲು ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಕ್ರಯ ಪತ್ರ ಮತ್ತು ಇ-ಸ್ವತ್ತು ದಾಖಲೆಗಳನ್ನು

ಹಾಜರುಪಡಿಸಿರುತ್ತೇನೆ. ಈ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ.

6. ನಾನು ಮತ್ತು 11 ನೇ ಪ್ರತಿವಾದಿ ದಾವಾ ಕ 1 ನೇ ಆಸ್ತಿಯಲ್ಲಿ ವಾಸವಾಗಿದ್ದೇವೆ ಎಂದು ತೋರಿಸಲು ಆ ಮನೆಯ ವಿದ್ಯುಚ್ಛಕ್ತಿ ಬಿಲ್ಲು, ನೀರಿನ ತೆರಿಗೆ ಹಾಗೂ ಅದರ ಪೋಟೋ ಇತರ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಇಲ್ಲ. ನಿ ಪಿ -37 ರ 13 ಪೋಟೋಗಳನ್ನು ಸಾಕ್ಷಿಗೆ ತೋರಿಸಿ ಇದು ದಾವಾ ಕ 1 ನೇ ಆಸ್ತಿ ಎಂದರೆ ಸಾಕ್ಷಿಯೂ ದಾವಾ ಕ 1 ನೇ ಆಸ್ತಿ ಅಲ್ಲ ಎಂದು ಹೇಳುತ್ತಾರೆ. ದಾವಾ ಕ 1 ನೇ ಆಸ್ತಿಯಲ್ಲಿ ವಾದಿ ಹಾಗೂ ಅವರ ತಾಯಿ ಈಗಲೂ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನಾನು, 11 ನೇ ಪ್ರತಿವಾದಿ ಹಾಗೂ ವಾದಿ ಹಾಗೂ ಅವರ ಅಣ್ಣ ತಮ್ಮಂದಿರು ಎಲ್ಲರೂ ಮುಸ್ಲಿಂ ಜನಾಂಗಕ್ಕೆ ಸೇರಿರುತ್ತೇವೆ ಎಂದರೆ ಸರಿ. 10 ನೇ ಪ್ರತಿವಾದಿ ಹಿಂಧೂ ಆಗಿರುತ್ತಾರೆ ಎಂದರೆ ನಿಜ. 5 ಮತ್ತು 10 ನೇ ಪ್ರತಿವಾದಿ ಮಿಲಾಪಿಯಾಗಿ ಸುಳ್ಳು ದಾಖಲೆಗಳ ಆಧಾರದ ಮೇಲೆ ವಾದಿಯ ಆಸ್ತಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಸುಳ್ಳು ಖರೀದಿ ಪತ್ರ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಖರೀದಿ ಪತ್ರ ಮಾಡಿಕೊಂಡಿರುವ ಕಾರಣ ದಾವಾ 1 ಕ ಆಸ್ತಿಯ ಕಬ್ಜಾವನ್ನು ನಾವು ತೆಗೆದುಕೊಳ್ಳಲು ಆಗಿರುವುದಿಲ್ಲ ಎಂದರೆ ಸರಿಯಲ್ಲ.

7. ನಾನು ಮುಸ್ಲಿಂ ಜನಾಂಗಕ್ಕೆ ಸೇರಿದ್ದರಿಂದ ವಾದಿಯನ್ನು ದಾವಾ 1 ಕ ಆಸ್ತಿಯಿಂದ ಖಾಲಿ ಮಾಡಿಸುತ್ತೇನೆಂದು ಹೇಳಿ ನಾನು ಸೇರಿಕೊಂಡು10 ಮತ್ತು 11 ನೇ ಪ್ರತಿವಾದಿಯರು ನಡುವೆ ಸುಳ್ಳು ಅದಲು ಬದಲು ಪತ್ರಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ 4 ನೇ ಪ್ಯಾರಾದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಖರೀದಿ ಪತ್ರವನ್ನಾಗಲೀ ಅಥವಾ ಅದಲು ಬದಲು ಪತ್ರಗಳನ್ನಾಗಲೀ ಕಾನೂನು ಬದ್ಧವಾಗಿ ಮಾಡಿಕೊಂಡಿಲ್ಲ ನಾನು 5,10,11 ನೇ ಪ್ರತಿವಾದಿಗಳು ಸೇರಿ ದಾವಾ 1 ಕ ಆಸ್ತಿಗೆ ಸಂಬಂದಿಸಿದಂತೆ ಖೊಟ್ಟಿ ಕಾಗದ ಪತ್ರಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳು ಖೊಟ್ಟಿ ದಾಖಲೆಗಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

(ಬಿ.ಸಿದ್ದರಾಜು)

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.